೧೮. ಬೆಂಗಳೂರು ನಗರ ಸಾರಿಗೆ ಸಮಸ್ಯೆಯನ್ನು ಸುಧಾರಿಸುವ ಬಗ್ಗೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ದಿದೇ ದಿನೇ ಬೆಂಗಳೂರು ನಗರದ ಜನಸಂಖ್ಯೆ ಹೆಚ್ಚುತ್ತಿರುವುದು ಹಾಗೂ ನಗರ ಹಾಗೂ ನಗರದ ಸುತ್ತಮುತ್ತ ಜನವಸತಿ ವಿಸ್ತೃತಗೊಳ್ಳುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಜನಸಂಖ್ಯೆ ಹಾಗೂ ಜನವಸತಿ ಬೆಳೆದಂತೆ ಬೇರೆ ಎಲ್ಲ ವಿಷಯಗಳಂತೆಯೇ ಪ್ರಾಮುಖ್ಯವಾಗಿ ನಗರ ಸಾರಿಗೆ ವ್ಯವಸ್ಥೆಯ ಮೇಲೆ ವಿಶೇಷ ಒತ್ತಡ ಬೀಳುವುದು ಅತ್ಯಂತ ಸಹಜ ವಿಚಾರ. ನಗರ ಸಾರಿಗೆ ವ್ಯವಸ್ಥೆಯಂ ಪ್ರಚಲಿತ ಸಮಸ್ಯೆಗಳನ್ನು ಎದುರಿಸುವುದರ ಜೊತೆಗೆ ಸಮಾನಾಂತರವಾಗಿ ಮುಂದೆ ಒದಗಬಹುದಾದ ಸವಾಲುಗಳನ್ನು ಎದುರಿಸಲುಂ ದೀರ್ಘಕಾಲಿಕ ಯೋಜನೆಗಳ ಬಗ್ಗೆ ಚಿಂತಿಸಿ ನಿರ್ಧರಿಸಿ ಅದಕ್ಕೆ ಬೇಕಾಗುವ ಪೂರ್ವಭಾವಿ ಕ್ರಮಗಳನ್ನಾದರೂ ಯೋಜಿಸಬೇಕಾದದ್ದು ಅಸ್ತಿತ್ವದಲ್ಲಿರುವ ಸರ್ಕಾರದ ಆದ್ಯ ಕರ್ತವ್ಯ. ಈ ಹಿಂದೆ ಸರ್ಕಾರ ಬೆಂಗಳೂರಿನ ಸುತ್ತ ವೃತ್ತಾಕಾರದ ರೈಲುಂ ನಿರ್ಮಾಣದ ಬಗ್ಗೆ ಹಾಗೂ ಬೆಂಗಳೂರಿನ ಒಳಗಡೆ ಮಾನೋ ರೈಲ್ ವ್ಯವಸ್ಥೆಗೊಳಿಸುವುದರ ಬಗ್ಗೆ ಆಲೋಚನೆ ಹರಿಸಿತ್ತೆಂದು ನನ್ನ ನಂಬಿಕೆ. ಈ ಬಜೆಟ್ ಮಂತ್ರಿ ಬೇಡಿಕೆಗಳ ಮಂಡನೆಯ ಸಂದರ್ಭದಲ್ಲಿ ಸದರಿ ವಿಚಾರದಲ್ಲಿ ಸರ್ಕಾರ ನಮಗೆ ಏನಾದರೂ ತಿಳುವಳಿಕೆ ನೀಡಬಹುದೆಂದು ಸೂಕ್ಷ್ಮಿಸಿದ್ದೆ. ಆದರೆ ಈ ಬಗ್ಗೆ ಯಾವುದೇ ಸಂದರ್ಭದಲ್ಲೂ ಪ್ರಸ್ತಾಪವಾಗಲಿಲ್ಲವಾದ್ದರಿಂದ ಬೆಂಗಳೂರು ಸುತ್ತ ವೃತ್ತಾಕಾರದ ರೈಲಿನ ಬಗ್ಗೆ ಹಾಗೂ ಬೆಂಗಳೂರು ಒಳಗಡೆ ಮಾನೋ ರೈಲ್ ವ್ಯವಸ್ಥೆಯ ಬಗ್ಗೆ ಸರಕಾರದ ಆಲೋಚನೆ ಏನೆಂಬುದನ್ನು ಸ್ಪಷ್ಟಪಡಿಸಬೇಕೆಂದುಂ ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರವರು ಬಹಳ ಮಹತ್ವವಾದ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವುದರಿಂದ ಇಲ್ಲಿ ಒಂದು ಪರ್ಯಾಯವಾದ ಸಾರಿಗೆ ವ್ಯವಸ್ಥೆಯಾಗಬೇಕೆಂಬುದನ್ನು ಸರ್ಕಾರ ಮನಗಂಡು ವೃತ್ತಾಕಾರದ ರೈಲಿನ ನಿರ್ಮಾಣ ಮತ್ತು ಮಾನೋ ರೈಲಿನ ಬಗ್ಗೆ ವಿಚಾರ ಮಾಡುತ್ತಿದೆ. ವೃತ್ತಾಕಾರದ ರೈಲಿನ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಅವರು ಅದಕ್ಕೆ ಬೇಕಾಗಿರತಕ್ಕಂತಹ ಹಣಕಾಸನ್ನು ಕೊಟ್ಟರೆ ಅನುಕೂಲವಾಗುತ್ತದೆ. ಅನೇಕ ಜನರು ಬೆಂಗಳೂರಿನಲ್ಲಿ ಮಾನೋ ರೈಲಿನ ವ್ಯವಸ್ಥೆಗೆ ಪ್ರಾಜೆಕ್ಟ್ ರಿಪೋರ್ಟನ್ನು ಮಾಡುತ್ತೇವೆ, ಹೊರ ದೇಶದಿಂದ ಹಣವನ್ನು ತರುವುದಕ್ಕೆ ಸಹ ಸಹಕಾರವನ್ನು ಮಾಡುತ್ತೇವೆಂದು ಹೇಳಿದ್ದರು. ಸರ್ಕಾರ ಇದನ್ನು ಮನಗಂಡು ಬೆಂಗಳೂರಿನಲ್ಲಿ ಮಾನೋ ರೈಲನ್ನು ಮಾಡಲಿಕ್ಕೆ ಪ್ರೈವೇಟ್ ಏಜೆನ್ಸಿಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರಿಸುವುದಕ್ಕೆ ಹೇಳಿದೆ. ಕೇಂದ್ರ ಸರ್ಕಾರದಿಂದ ಇತ್ತೀಚೆಗೆ ಬಂದಿರತಕ್ಕಂತಹ ವರದಿಗಳ ಪ್ರಕಾರ ಹೊರದೇಶದಿಂದ ರಾಜ್ಯ ಸರ್ಕಾರಕ್ಕೆ ಈ ರೀತಿಯ ಸಾರಿಗೆ ವ್ಯವಸ್ಥೆಗೆ ಹಣವನ್ನು ತರುವುದಕ್ಕೆ ಪ್ರಯತ್ನ ಮಾಡಿದರೆ ಸಹಕಾರವನ್ನು ಕೊಡುತ್ತಾರೆಂದು ಕೇಳಿದ್ದೇವೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳಬೇಕೆಂದರೆ ಬೆಂಗಳೂರಿಗೆ ಮಾನೋ ರೈಲನ್ನು ತಂದರೆ ಬಹಳ ಉತ್ತಮವಾಗುತ್ತದೆ. ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲುಂ ಏಜೆನ್ಸಿಯವರಿಗೆ ಪರವಾನಿಗೆ ಕೊಟ್ಟಿದ್ದೇವೆ. ಅದು ಬಂದ ನಂತರ ಹಣಕಾಸು ಹಾಗೂ ಇತರೇ ವ್ಯವಸ್ಥೆ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆ.

೧೯. ಮೈಸೂರಿಂ ಅರಮನೆಯಂ ಆಡಳಿತವನ್ನು ನೋಡಿಕೊಳ್ಳಲು ಒಂದುಂ ಟ್ರಸ್ಟ್ ನೇಮಿಸಿ ಮಾಡುವ ಬಗ್ಗೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮೈಸೂರು ಅರಮನೆ ಇಡೀ ದೇಶದ ಜನರನ್ನು ಮಾತ್ರವಲ್ಲ ಜಗತ್ತಿನ ಮೂಲೆ ಮೂಲೆಗಳಿಂದ ಪ್ರೇಕ್ಷಕರನ್ನು ಆಕರ್ಷಿಸುತ್ತಿರುವ ಸುಂದರವಾದ ಅರಮನೆ. ಪ್ರತಿ ದಿವಸ ಈ ಅರಮನೆಯನ್ನು ವೀಕ್ಷಿಸಲು ಎರಡು ರೂ. ಪ್ರವೇಶ ಶುಲ್ಕ ಪಡೆದು ವೀಕ್ಷಕರನ್ನು ಬಿಡಲಾಗುತ್ತಿದೆ. ಈ ಅರಮನೆಯ ಆಡಳಿತ ವ್ಯವಹಾರವನ್ನು ನೋಡಿಕೊಳ್ಳಲು ಸರ್ಕಾರವು ಟ್ರಸ್ಟ್ ಒಂದನ್ನು ರಚನೆ ಮಾಡಿದೆಯೇ? ಈ ಟ್ರಸ್ಟ್‌ನ ಸದಸ್ಯರ್ಯಾರು? ಇಲ್ಲಿ ವಸೂಲಾದ ಹಣವನ್ನು ಯಾವ ಬಾಬತ್ತಿಗಾಗಿ ಬಳಸಲಾಗುತ್ತಿದೆ. ಇತ್ತೀಚೆಗೆ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ಅರಮನೆಯಂ ತಮಗೆ ಸೇರಿದ್ದೆಂದು ಅನೇಕ ಬಾರಿ ಹೇಳಿಕೆಯನ್ನು ಇತ್ತಿದ್ದಾರೆ. ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು? ಈ ಅರಮನೆಯನ್ನು